ಅಪ್ಪ ಮದುವೆಯಾದ ಮೇಲೆ ಕುಣಿತ ನಿಲ್ಲಿಸಿಬಿಟ್ಟಿದ್ದನಂತೆ. ಅಪ್ಪ ಛತ್ರಿ ಮೆರೆಸಿದ್ದನ್ನು ನೋಡಿದ್ದು ಅದೇ ಮೊದಲು, ಅದೇ ಕೊನೆ.

ಆದರೆ ಚಿಕ್ಕಪ್ಪ ಮೊಳ್ಳಪ್ಪ ಗುಡ್ಡ ಕುಣಿಯುವುದರಲ್ಲಿ ನಿಸ್ಸೀಮ. ಕೊಪ್ಪಲಿನ ಗುಡ್ಡಗಳು ಅಂದರೆ ಸುತ್ತಲಿಗೆ ಪ್ರಸಿದ್ಧಿ. ನೀಲಿ ಕರಿಯಪ್ಪ ಗುಡ್ಡರ ಹಿರಿಯ. ಮೊಳ್ಳಪ್ಪ, ಕಾಡಪ್ಪ, ಜವರಪ್ಪ ಮುಂಚೂಣಿ ಕುಣಿತಗಾರರು. ದಾಸಪ್ಪ, ತಮ್ಮಣ್ಣ ಚಕ್ರವಾದಿ ನುಡಿಸುವವರು. ಹಿಮ್ಮೇಳಗಾರರು ಮೂರ್‍ನಾಕು ಜನ. ಕಾಲಿಗೆ ಗೆಜ್ಜೆಕಟ್ಟಿ, ಪಂಚೆಯನ್ನು ಕಾಸೆಯಂತೆ ಮೇಲೆತ್ತಿ ಕಟ್ಟಿ, ಹಣೆತುಂಬ ವಿಭೂತಿ ಹಚ್ಚಿ, ತಲೆಗೆ ಪೇಟ ಸುತ್ತಿ, ಬಲಗೈಲಿ ಬಿಳಿವಸ್ತ್ರವನ್ನು ತಿರುಗಿಸುತ್ತಾ ಕುಣಿಯಲು ನಿಂತರೆ ಶೀಗವಾಳು ಕಣಿಯ, ಕುಳ್ಳರ ತಮಟೆ ಏಟು ಸಾಲುತ್ತಿರಲಿಲ್ಲ.

ಗುಡ್ಡರ ಮಧ್ಯೆ ನಿಂತಿರುತ್ತಿದ್ದ ನೀಲಿಕರಿಯಪ್ಪ 'ಒಲಿದು ಬಾರೆ ತಾಯಿ / ಒಲಿದು ಬಾರೆ' ಅಂತ ದನಿ ಎತ್ತಿದರೆ, ಮೊದಲಿಗೆ ಮುಂಚೂಣಿ ಕುಣಿತಗಾರರು ಝಳಕ್ ಝಳಕ್ಕನೆ ಹೆಜ್ಜೆ ಹಾಕುತ್ತ ಮುಂದೆ ಬಂದು ಕಾಳವ್ವದೇವಿಯ ಪ್ರಭಾವಳಿಯ ಶಿರದ ಕಡೆಗೆ ದೃಷ್ಟಿ ನೆಟ್ಟು ಕುಲುಕುತ್ತ ಒಮ್ಮೆ ಮುಂದಕ್ಕೆ; ಅದೇ ಲಯದಲ್ಲಿ ಸೂಯ್ಯನೆ ಹಿಂದಕ್ಕೆ; ಒಮ್ಮೆ ಭುಜ ಬಾಗಿಸಿ ಮುಂದಕ್ಕೆ; ಮತ್ತೆ ತಲೆ ಮೇಲೆತ್ತಿ ಸೂಯ್ಯನೆ ಹಿಂದಕ್ಕೆ; ಒಮ್ಮೆ ನಡು ಬಗ್ಗಿಸಿ, ಒಮ್ಮೆ ಕೂತು ಪ್ರತಿ ನೃತ್ಯಭಂಗಿಗೆ ಹೊಯ್ ಅಂತ ಸೊಲ್ಲು ಹಾಕುತ್ತ ಬೀದಿ ಧೂಳೆಬ್ಬಿಸಿಬಿಡುತ್ತಿದ್ದರು. ಸಮಪಾತಳಿಯಲ್ಲಿ ಏರಿಳಿಯುತ್ತ ಲೀಲೆಯಾಡುವ ನೀರ ಮೇಲಣ ಅಲೆಯಂತೆ ಗುಡ್ಡ ಕುಣಿತ ಕಾಣುತ್ತಿತ್ತು. ತಾವೆಲ್ಲ ಕನಿಷ್ಠ ತಿಂಗಳುಗಟ್ಟಲೆ ಅದೇ ಗುಂಗಿನಲ್ಲಿ ಕುಣಿಯುತ್ತ, ನರ್ತನ ಮಾಡುವಂತೆ ಸಮ್ಮೋಹನಗೊಳಿಸಿಬಿಡುತ್ತಿತ್ತು...

ವೀರಭದ್ರೇಗೌಡರಿಗೆ ಅವತ್ತಿನ ಕುಣಿತದ ಲಾಸ್ಯಮಂಡಲವೇ ತಮ್ಮ ಮನದುಂಬಿಕೊಂಡಿತು. ಆ ಚಿತ್ರ ತಲೆದಿಂಬಿನಿಂದ ಹೊಮ್ಮಿ ಒತ್ತರಿಸಿ ಬಂದಂತಾಯಿತು. ಮೊಳ್ಳಪ್ಪ ಕುಣಿಯುತ್ತಿದ್ದ ಬಗೆಯ ಲಯವಿನ್ಯಾಸ ಕೈ ಹಿಡಿದು ಎಬ್ಬಿಸಿತು. ಎದ್ದು ಎದುರುಗಡೆ ನಿಲುಗನ್ನಡಿ ಮುಂದೆ ನಿಂತರು. ತಮ್ಮನ್ನು ತಾವೇ ನೋಡಿಕೊಳ್ಳುತ್ತ ಮೊಳ್ಳಪ್ಪನಂತೆ ತೋಳು ಮೇಲೆತ್ತಿ ಆಡಿಸುತ್ತ, ಭುಜ ಕುಣಿಸುತ್ತ, ಕಾಲುಗಳನ್ನು ಎತ್ತೆತ್ತಿ ಊರುತ್ತ ಹೆಜ್ಜೆ ಹಾಕಿದರು. ತೋಳು–ಭುಜವನ್ನು ಏರಿಳಿಸಿ ಆಡುವುದಕ್ಕೂ ಕಾಲನ್ನು ಲಯಬದ್ಧವಾಗಿ ಊರುವ ಕುಲಕಾಟಕ್ಕೂ ತಾಳಮೇಳ ಕೂಡಲಿಲ್ಲ. ಹಾಲ್‌ನಲ್ಲಿ ಕೂತು ಮೊಬೈಲ್ ಯೂಟ್ಯೂಬ್‌ನಲ್ಲಿ ಆರೋಗ್ಯದ ಟಿಪ್ಸ್ ನೋಡುತ್ತಿದ್ದ ಪಾರ್ವತಿ ಬಂದು ನಗುತ್ತ ನಿಂತಳು. ಇವರು ನಗುವಂತೆ ತೋರಿಸಿಕೊಂಡರು, ಆದರೆ ನಗಲಾಗಲಿಲ್ಲ. 'ಒಂದೊಂದು ಸಲ ಆ ಮಕ್ಕಳಾಟ ನೆನೆಸಿಕೊಳ್ಳೋದ್ರಲ್ಲೂ ಖುಷಿ ಇರ್ತದೆ' ಅನ್ನುತ್ತ ಕರೆಗಂಟೆಯ ಸದ್ದು ಕೇಳಿ ಅತ್ತ ನಡೆದಳು.

ಅವರು ಹೆಂಡತಿಯನ್ನು ಹಿಂಬಾಲಿಸಿ ಹಾಲ್‌ಗೆ ಬಂದರು. ಎದುರುಗಡೆಯೇ ಗೋಡೆಗಡಿಯಾರ. ಅದಕ್ಕೆ ನಿಶ್ಚಲತೆ ಎಂಬುದೇ ಇಲ್ಲ. ಕೈಲಿ ಕೆಲಸವಿಲ್ಲದಿದ್ದಾಗ, ಮನಸ್ಸು ಖಾಲಿ ಖಾಲಿ ಅನಿಸಿದಾಗ, ದೇಹಕ್ಕೆ ಹುಷಾರಿಲ್ಲದೆ ಇದ್ದಾಗ ಸಮಯ ಸರಿಯುವುದೇ ಇಲ್ಲ ಎಂಬುವುದಿದೆ. ಆದರೆ ಈ ಕೊರೊನಾ ಅವಧಿಯಲ್ಲಂತೂ ಈ ಮಾತು ಉಲ್ಟಾ ಹೊಡೆಯುತ್ತಿದೆ. ಕಾಲ ಯಾವುದೇ ಜವಾಬ್ದಾರಿಯನ್ನು ಹೇರದೆ ಸುಮ್ಮನೆ ಓಡುತ್ತಿದೆ. ನಿವೃತ್ತ ಮನಸ್ಸುಗಳಿಗೆ ಮುಪ್ಪನ್ನೀಯುವ ಕಾಲದ ಹುನ್ನಾರ ಇದಿರಬಹುದು.

ಪಾರ್ವತಿ ಬಾಗಿಲು ತೆರೆದು 'ಗ್ಯಾಸ್ ಸಿಲಿಂಡರ್ ಬಂತ್ರೀ' ಅಂತ ಕೂಗಿದಳು. ಬಹುಶಃ ಗಂಡ ಇನ್ನೂ ನಿಲುಗನ್ನಡಿ ಮುಂದೆ ನಿಂತು ನರ್ತನ ಮಾಡುತ್ತಿರಬಹುದೆಂದುಕೊಂಡಿರಬಹುದು. ಹಣ ತರಬೇಕೆಂಬ ಸೂಚನೆಯದು. ಅವಳ ಹಿಂದೆಯೇ ಇದ್ದ ಇವರು ಗೊತ್ತಾಯಿತೆಂದು ಹೇಳಿ ಒಳ ಹೋಗಿ ಹಣ ತಂದರು.

ಪಾರ್ವತಿ ಮಾತು ಮುಂದುವರಿಸಿ 'ಎಷ್ಟಪ್ಪ ಗಂಗರಾಜ?' ಕೇಳಿದಳು. ಅವನು ಸಿಲಿಂಡರ್ ಮೇಲಿನ ಧೂಳು ಒರೆಸುತ್ತ 'ಒಂಬೈನೂರು ಆಯ್ತಲ್ಲ ಅಕ್ಕ' ಅಂದ. ಇವಳು 'ಆಂ, ಒಂಬೈನೂರಾ' ಅಂತ ರಾಗ ಎಳೆದಳು. ಅವನು 'ಯಾಕಕ್ಕಾ ಪೇಪರ್, ಟೀವಿ, ವಾಟ್ಸಾಫ್‌ನಲ್ಲೆಲ್ಲ ಇದೇ ಕಥೆಯಲ್ವಾ? ನೀವು ಕೇಳಿಲ್ವಾ? ಬರೀ ಮೂರು ತಿಂಗಳಲ್ಲಿ ಮೂರು ಸಲ ಬೆಲೆ ಏರಿಸಿಬುಟ್ರು, ನೂರು ದಾಟೋಯ್ತು' ಅನ್ನುತ್ತಿದ್ದ.

ಅವಳು ವಿಷಾದದ ದನಿಯಲ್ಲಿ 'ಇದೆಲ್ಲಿಗಂಟ ಹೀಗೇ ಏರ್ತಾ ಹೋಯ್ತದೆ? ಯಾವುದು ಕೊಂಡ್ರು ಎಲ್ಲ ದುಬಾರಿನೇ...' ಅಂದಳು.

ಗಂಗರಾಜು ಹಣ ಈಸಿಕೊಳ್ಳುತ್ತ 'ನಾನು ಹದಿನೈದು ವರ್ಷದಿಂದ ಇದೇ ಕೆಲ್ಸ ಮಾಡ್ಕೊಂಡು ಬತ್ತಾಯಿವ್ನಿ. ಹಿಂಗೇರಿದ್ದು ನೋಡಿರಲಿಲ್ಲ. ನಮ್ಮಂಥೋರ ಗತಿಯೇನಕ್ಕಾ?' ಅಂದ. ಅವನು ಅಸಹಾಯಕತೆಯಿಂದ ಹೇಳಿದನೊ ಅಥವಾ ಟಿಪ್ಸ್‌ಗಾಗಿ ಕುರುಣೆ ತುಂಬಿ ಆಡಿದನೊ ತಿಳಿಯಲಿಲ್ಲ.

ಇವರು 'ಮನುಷ್ಯನ ಬೆಲೆ ಏರಿಲ್ಲ ಬಿಡಪ್ಪ' ಅಂತ ನಗಾಡಿದರು. ಸಿಲಿಂಡರ್ ಹುಡುಗ ತಿರುಗಿ ಮುಖ ನೋಡಿದನಷ್ಟೆ, ಮಾತಾಡಲಿಲ್ಲ. ಇದು ಜೋಕ್ ಕಣಪ್ಪ ಅನ್ನುವ ಥರ ಅವನಿಗೆ ಪೋಸ್ ಕೊಟ್ಟರು. ಅವನ ಮೌನ ಪ್ರತಿಕ್ರಿಯೆ ಯಾಕೊ ಇವರಿಗೆ ನಿರ್ಲಕ್ಷ್ಯದ ಕೆಂಡ ಮುಟ್ಟಿಸಿದಂತಾಯಿತು.

ವೀರಭದ್ರೇಗೌಡರು ಸೋಫಾದ ಮೇಲೆ ಕೂತುಕೊಂಡರು. ಮೇಲಕ್ಕೂ ಏರದ ಕೆಳಕ್ಕೂ ಇಳಿಯದ ನಮ್ಮಂಥ ಜನರ ಜೋಕು ಅಂದರೆ ಹೀಗೆಯೇ ಅಲ್ಲವಾ? ಸಮಸ್ಯೆಯನ್ನು ಜೋಕು ಮಾಡುವುದು ಅಥವಾ ಪರಿಣಾಮ ಬೀರುವ ಸುಧಾರಣಾಮಾರ್ಗ ರೂಪಿಸಲಾಗದೆ ವೈಯಕ್ತಿಕವಾಗಿ ತಹತಹಿಸುವುದು...

ಗಂಗರಾಜು ಅಕ್ಕನಿಗೆ ನಮಸ್ಕಾರ ಮಾಡಿ ಹೋಗಿದ್ದ. ಗ್ಯಾಸ್ ಮುಗಿದ ತುರ್ತು ಸಂದರ್ಭದಲ್ಲಿ ಫೋನ್ ಮಾಡಿದರೆ ತಕ್ಷಣಕ್ಕೆ ಒಂದು ಸಿಲಿಂಡರ್ ತಂದುಕೊಡುವ ಅಕ್ಕನ ಆತ್ಮೀಯ! ತುರ್ತು ಸಮಸ್ಯೆಯನ್ನು ಇಬ್ಬರೂ ಮಾತಾಡಿಕೊಂಡು ಸರಳವಾಗಿ ಪರಿಹರಿಸಿಕೊಳ್ಳುತ್ತಾರೆ...

ವೀರಭದ್ರೇಗೌಡರು ಊಟ ಮುಗಿಸಿ ಮತ್ತೆ ಅಡ್ಡಾಗುವುದು ಬೇಡವೆಂದು ದಿನಪತ್ರಿಕೆ ಕೈಗೆ ಎತ್ತಿಕೊಂಡರು. ಆಗ ಈ ಪತ್ರಿಕೆ ಓದಿ ಮುಗಿಸಲು ಕನಿಷ್ಠ ಒಂದು ಗಂಟೆಯಾದರೂ ಬೇಕಿತ್ತು. ಈಗ ಹದಿನೈದರಿಂದ ಇಪ್ಪತ್ತು ನಿಮಿಷ ಸಾಕು ಅಂದುಕೊಳ್ಳುತ್ತ ಪುಟ ಮಗುಚಿದೊಡನೆಯೆ ಜನಪ್ರತಿನಿಧಿಗಳಿಗಾಗಿ ರಾಜಧಾನಿಯಲ್ಲೊಂದು ಕ್ಲಬ್ಬು ಸ್ಥಾಪನೆಯ ಸುದ್ದಿ! ಕಣ್ಣಾಡಿಸಿದರು. ಶಾಸಕರಿಗೆ ಪಾರಂಪರಿಕ ಕಟ್ಟಡವಾದ ಬಾಲಬ್ರೂಯಿಯಲ್ಲಿ ಈ ಮನೋರಂಜನಾ ಕ್ಲಬ್ಬು. ಜನಸಾಮಾನ್ಯರ ದಿನಬಳಕೆಯ ವಸ್ತುಗಳ ಮೇಲೆ ಏರಿಸಿರುವ ಬೆಲೆಯನ್ನು ಕೊಂಚ ಇಳಿಸಿ ಎಂಬ ಬೇಡಿಕೆಗೆ ಒಮ್ಮತವಿಲ್ಲದ ಇವರಿಗೆ ಕ್ಲಬ್ಬು ಸ್ಥಾಪನೆಗೆ ಮಾತ್ರ ಒಮ್ಮತದ ದನಿ! ಪ್ರಜೆ ಮತ್ತು ಪ್ರಭುತ್ವದ ನಡುವಿನ ವ್ಯಂಗ್ಯ ಅಂದರೆ ಇದು! ಬಹು ನಾಜೋಕಿನಲ್ಲಿ ಪತ್ರಿಕೆಯು ವರದಿ ಮಾಡಿದಂಗಿತ್ತು.

ಅವರು ಪುಟ ಹೊರಳಿಸಿದರು. ತಾಲಿಬಾನಿಗಳ ಅಮಾನುಷ ವರ್ತನೆ! ಅಲ್ಲಿ ಹೆಣ್ಣುಮಕ್ಕಳಿಗೆ ನೌಕರಿ, ಮನರಂಜನೆ, ಶಿಕ್ಷಣ, ಸಾರ್ವಜನಿಕವಾಗಿ ಪ್ರದರ್ಶನಗೊಳ್ಳುವುದು ಯಾವುದಕ್ಕೂ ಅವಕಾಶವಿಲ್ಲ. ಆದೇಶ ಉಲ್ಲಂಘಿಸಿದರೆ ಕಠಿಣಶಿಕ್ಷೆ. ಜನಾಂಗದ ಸಂಸ್ಕೃತಿ, ಸಂರಚನೆಗಳಿಗೆ ಪೋಷಕಧಾತುವಾದ ಮಹಿಳಾಶಕ್ತಿಯನ್ನೇ ನಿರ್ವೀರ್ಯಗೊಳಿಸುವ ಬಗೆ ಇದು. ಎಂಥ ಸೈತಾನ ಸಂತತಿಯ ಉಳಿಕೆಗಳಿವು?

ಮನಸ್ಸು ಖಿನ್ನವಾಯಿತು.

ಪತ್ರಿಕೆಯನ್ನು ಮಡಚಿಟ್ಟು, ಹೆಂಡತಿಗೆ ಹೇಳಿ, ಹೊರಬಂದರು. ರಸ್ತೆ ಮೇಲೆ ಜನ. ವಾಹನಗಳ ಓಡಾಟ. ಜನರ ಮುಖದ ಮೇಲಿನ ಮಾಸ್ಕ್ ಬಿಟ್ಟರೆ ಕೊರೊನಾ ಭೀತಿಯ ಲವಲೇಶವೂ ಇಲ್ಲ. 'ಮನೆ ಬಿಟ್ಟು ಬರಬೇಡಿ, ಗುಂಪುಗೂಡಬೇಡಿ' ಎಂಬ ಎಚ್ಚರಿಕೆ ಕೇಳಿ ಕೇಳಿ ವರ್ಷವೊಪ್ಪತ್ತಿನಿಂದ ಸಾಕಾಗಿತ್ತು. ಬದುಕು ನೀಸಬೇಕಲ್ಲ... ವೀರಭದ್ರೇಗೌಡರು ಹಾಗೇ ಮುಂದೆ ಬಂದರು. ಸಂಜೆಹೊತ್ತು ಹೂ ಬಿಕರಿಯಾಗಬಹುದೆಂದು ಹೂವಿನ ಹುಡುಗ ಸಿದ್ಧವಾದವನಂತೆ ಎದ್ದು ನಿಂತಿದ್ದಾನೆ. ತನ್ನ ಹೂ ಗುಡ್ಡೆಗಳ ಮೇಲೆ ಕೈಯಾಡಿಸುತ್ತ, ಅತ್ತ ಇತ್ತ ಹೋಗುತ್ತ ಬರುತ್ತ ಇರುವ ಹೆಂಗಸರ, ಗಂಡಸರ, ಹುಡುಗಿಯರ ಕಡೆ ಕಣ್ಣಾಡಿಸುತ್ತಾನೆ. ವಾಹನಗಳ ವೇಗದ ಗತಿ ಕಮ್ಮಿಯಾಗುವುದೇ ಅಂತ ಗಮನಿಸುತ್ತಾನೆ. ಇಂಥವರು ಮಾತ್ರ ತನ್ನ ತಳ್ಳುಗಾಡಿ ಕಡೆಗೆ ಸುಳಿಯೊ ಪರಮಾತ್ಮರು ಎಂಬುದು ಅವನ ನಿರೀಕ್ಷೆ.

ವೀರಭದ್ರೇಗೌಡರು ಮುಂದೆ ನಡೆದರು. ಹಿಂದೆ ದ್ರಾಕ್ಷಿ, ತೆಂಗಿನ ತೋಟವಾಗಿದ್ದ ಐದಾರು ಎಕರೆ ಜಾಗವನ್ನೇ ಈಗ ಲೇಔಟ್ ಮಾಡಿಕೊಂಡು ಉಳ್ಳವರು ಕಟ್ಟಿಕೊಂಡಿರುವ ಮಹಲುಗಳ ಮುಂದಣ ರಸ್ತೆ ಮೇಲೆ ಮೂರ್‍ನಾಕು ಸುತ್ತು ಹಾಕಿ ಕಲ್ಲು ಬೆಂಚಿನ ಮೇಲೆ ಬಂದು ಕೂತರು.

ಆಗೊಂದು ಈಗೊಂದು ನಿವಾಸಿಗಳ ವಾಹನ ಬಿಟ್ಟರೆ ಲೇಔಟ್ ನಿಶ್ಶಬ್ದದ ಗೂಡಿನಂಗಿತ್ತು. ತಂಪುಗಾಳಿಯ ವಾತಾವರಣ ಹಿತವಾಗಿತ್ತು. ಎದುರುಗಡೆ ಕಿರು ಮೈದಾನದಲ್ಲಿ ಆಡುತ್ತಿದ್ದ ಚಿಕ್ಕ ಹುಡುಗರ ಸದ್ದುಗದ್ದಲ ಸೈತ ಸಹ್ಯವಾಗಿತ್ತು. ಗಡಿಯಾರದ ಮುಳ್ಳಿನಂತೆ ಸುತ್ತುತ್ತಲೇ ಇರುವ